ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕ 05-08-2026.

ಮುಂದುವರೆದ ಪಾಟೀಸವಾಲು - 30, 33 ಮತ್ತು 36 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಆರ್.ಆರ್. ವಕೀಲರಿಂದಃ

32. ನೀವು ಹಿಂದಿನ ಸಲ ಬಂದಾಗ ಬ್ಯಾಂಕ್ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ ಎಂದು ಹೇಳಿದ್ದೀರಿ, ಈಗ ಸಲ್ಲಿಸಲು ತಯಾರಿರುತ್ತೀರಾ ಎಂದರೆ ಸಾಕ್ಷಿದಾರರು, ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನನ್ನ ಸಹೋದರ, ನಿನ್ನ ಹೆಸರಿನಲ್ಲಿ ಚೆಕ್ ಕೊಟ್ಟರೆ ನನಗೆ ಟ್ಯಾಕ್ಸ್ ಬರುವುದಿಲ್ಲ ಅಂತಾ ಹೇಳಿರುತ್ತಾರೆ ಎನ್ನುತ್ತಾರೆ.

33. ನೀವು ಪ್ರತಿವಾದಿ ನಂ.30 ಇವರಿಗೆ ಹಣ ಕೊಟ್ಟ ಬಗ್ಗೆ ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿದಾರರು, ನಾವು ನಗದು ರೂಪದಲ್ಲಿ ಕೊಟ್ಟಿದ್ದೇವೆ ಮತ್ತು ನಂಬಿಕೆ ಆಧಾರದ ಮೇಲೆ ಕೊಟ್ಟಿದ್ದೇವೆ ಎನ್ನುತ್ತಾರೆ.

34. ನೀವು ಹೊಳ್ಳ ವಕೀಲರನ್ನು ನೇಮಿಸಿಕೊಂಡು ಪ್ರತಿವಾದಿಯರಿಗೆ ಕಾನೂನು ಬದ್ಧ ನೋಟೀಸು ಕೊಡಿಸಿದ್ದೀರಿ ಎಂದರೆ ಸಾಕ್ಷಿದಾರರು, ನಾವು ಕೊಡಿಸಿಲ್ಲ ಎನ್ನುತ್ತಾರೆ.

35. ವಾದಪತ್ರದ ಪ್ಯಾರಾ ನಂ.12 ರಲ್ಲಿ, ನೋಟೀಸಿನಲ್ಲಿ ನೀಡಿರುವ ಎಲ್ಲಾ ಅಂಶಗಳು ಮತ್ತು ಮಾಹಿತಿಗಳು ಸಂಪೂರ್ಣವಾಗಿ ಸರಿಯಾಗಿದೆ ಎಂದು ನಾವು ಒಪ್ಪುವುದಿಲ್ಲ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿದಾರರು, ನಾವು ಹೊಳ್ಳ ವಕೀಲರ ಕಡೆಯಿಂದ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ ಎನ್ನುತ್ತಾರೆ. ನೀವು ಮತ್ತು ಉಳಿದ ಅಕ್ಕ-ತಂಗಿಯರು ಕೂಡಿಕೊಂಡು

ದಿನಾಂಕ 8-3-2022 ರಂದು ಹೊಳ್ಳ ವಕೀಲರ ಕಡೆಯಿಂದ ಎಲ್ಲರೂ ನೋಟೀಸು ಪ್ರತಿವಾದಿಯರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿದಾರರು, ನಾನು ನೋಟೀಸು ಕಳಿಸಿರುವುದಿಲ್ಲ, ಆದರೆ ಉಳಿದ ಪ್ರತಿವಾದಿಯರು ನೋಟೀಸು ಕಳಿಸಿರಬಹುದು ಎನ್ನುತ್ತಾರೆ. ಪ್ರತಿವಾದಿ1 ರಿಂದ 3 ರವರು ವಕೀಲರ ಮೂಲಕ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು, ಕೊಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ವಾದಪತ್ರದ ಪ್ಯಾರಾ-11 ರಲ್ಲಿ, ಏಪ್ರಿಲ್-2022 ರಲ್ಲಿ ಜಯರಾಮರೆಡ್ಡಿಯವರು ನನ್ನನ್ನು ಮತ್ತು 1 ನೇ ವಾದಿಯರನ್ನು ಭೇಟಿಯಾಗಿ, ಈ ತರಹ ನೋಟೀಸು ನೀವು ಅಕ್ಕ-ತಂಗಿಯರು ನೋಟೀಸು ಕೊಟ್ಟಿದ್ದೀರಿ ಎಂದು ತಿಳಿಸಿದ್ದರು ಎಂದು ನಮೂದು ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು, ಆ ಸಮಯದಲ್ಲಿ ನಮ್ಮ ಅಕ್ಕ-ತಂಗಿಯರಲ್ಲಿ ಭಿನ್ನಾಭಿಪ್ರಾಯ ಇತ್ತು ಎನ್ನುತ್ತಾರೆ. ಯಾವ ಭಿನ್ನಾಭಿಪ್ರಾಯ ಇತ್ತು ಎಂದರೆ ಸಾಕ್ಷಿದಾರರು, ಶಾರದ, ಉಮಾ ಮತ್ತು ಭಾಗ್ಯ ಇವರ ನಡುವೆ ಭಿನ್ನಾಭಿಪ್ರಾಯ ಇತ್ತು ಎನ್ನುತ್ತಾರೆ. ಶ್ರೀವತ್ಸ ಅಸೋಸಿಯೇಟ್ಸ್ ರವರು ನೀವು ಕೊಟ್ಟ ನೋಟೀಸಿಗೆ ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೋಟೀಸು ದಿನಾಂಕ 08-03-2022 ರಲ್ಲಿ 1 ನೇ ವಾದಿ ಅಶ್ವತ್ಥ ಇವರ ವಿಳಾಸವನ್ನು 1st Floor, Ramesh Building, Ayyappa Layout, Behind Varthur Police Station, Thippasandra Road, Varthur, Bengaluru ಎಂದು ನಮೂದಿದೆ ಎಂದರೆ ಸಾಕ್ಷಿದಾರರು, ಇದೆ ಎನ್ನುತ್ತಾರೆ.

36. ಅದೇ ರೀತಿ ಸದರಿ ನೋಟೀಸಿನಲ್ಲಿ ನಿಮ್ಮ ವಿಳಾಸ ನಂ.7, 3 ನೇ ಮುಖ್ಯ ರಸ್ತೆ, 4 ನೇ ಅಡ್ಡ ರಸ್ತೆ, ಎಲ್.ವಿ.ಶಾಸ್ತ್ರಿ ನಗರ, ಹೆಚ್.ಎ.ಎಲ್. ಪೋಸ್ಟ್, ಬೆಂಗಳೂರು ಎಂದು ನಮೂದಿದೆ ಎಂದರೆ ಸರಿ.

37. ಅದೇ ರೀತಿಯಾಗಿ 1 ರಿಂದ 3 ನೇ ಪ್ರತಿವಾದಿಯರ ವಿಳಾಸ ನೋಟೀಸಿನಲ್ಲಿ ನಮೂದಿಸಿದ್ದು ಸರಿಯಾಗಿರುತ್ತದೆ ಎಂದರೆ ಸರಿ. ಸದರಿ ನೋಟೀಸಿಗೆ ವಕೀಲರಿಗೆ ಮಾಹಿತಿ ಯಾರು ಕೊಟ್ಟರು ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆ ಹಾಕಿದ ನಂತರ ನಿಮ್ಮ ಅಕ್ಕ-ತಂಗಿಯರನ್ನು ನೋಟೀಸಿನ ಬಗ್ಗೆ ಕೇಳಿದ್ದೀರಾ ಎಂದರೆ ಸಾಕ್ಷಿದಾರರು, ಕೇಳಿದ್ದೇನೆ ಎನ್ನುತ್ತಾರೆ.

38. ನೋಟೀಸಿನ ಪ್ಯಾರಾ-4 ರಲ್ಲಿ, ಶ್ರೀಮತಿ ಜಯಮ್ಮ, ಶಂಕರಪ್ಪರೆಡ್ಡಿಯವರ ಹೆಂಡತಿ ದಿನಾಂಕ 3-8-1975 ರಲ್ಲಿ ತೀರಿಕೊಂಡಿರುತ್ತಾರೆ ಮತ್ತು ಶಂಕರಪ್ಪರೆಡ್ಡಿಯವರು ಯಾವುದೇ ಮೃತ್ಯುಪತ್ರವನ್ನು ಬರೆಯದೇ ದಿನಾಂಕ 21-4-2003 ರಂದು ತೀರಿಕೊಂಡಿರುತ್ತಾರೆ ಮತ್ತು ಅವರು ದಿನಾಂಕ 10-10-2002 ರಲ್ಲಿ ಮೃತ್ಯುಪತ್ರ ಮಾಡಿ ಒಟ್ಟು ಕುಟುಂಬದ ಆಸ್ತಿಯನ್ನು ಅವರ ಮಕ್ಕಳಿಗೆ ಬರೆದಿರುತ್ತಾರೆ ಎಂದರೆ ಸಾಕ್ಷಿದಾರರು, ನನಗೆ ನೋಟೀಸು ಕೊಟ್ಟಿಲ್ಲ ಎನ್ನುತ್ತಾರೆ.

39. ನೀವು ನ್ಯಾಯಾಲಯದಲ್ಲಿ ಕೇವಿಯೇಟನ್ನು ಸಲ್ಲಿಸಿ ಪ್ರತಿವಾದಿಯರಿಗೆ ಆದೇಶ ಮಾಡಬಾರದು ಎಂದು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿದಾರರು, ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ ಎನ್ನುತ್ತಾರೆ. ನಿಮ್ಮ ವಕೀಲರು ಅಕ್ಷತಾಶೆಟ್ಟಿ ಮತ್ತು ರಾಜ್ ಕುಮಾರ್ ಇರುತ್ತಾರೆ ಎಂದರೆ ಸಾಕ್ಷಿದಾರರು, ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ ಎನ್ನುತ್ತಾರೆ. ನಿಮ್ಮ ಕೇವಿಯೆಟ್ ಅರ್ಜಿಯ ಪ್ಯಾರಾ-3 ರಲ್ಲಿ, ನೋಟೀಸು ದಿನಾಂಕ 8-3-2022 ಮತ್ತು ರಿಪ್ಲೆ ನೋಟೀಸು ದಿನಾಂಕ 18-3-2022 ಎರಡನ್ನೂ

ಒಪ್ಪಿಕೊಂಡಿದ್ದೀರಿ ಎಂದರೆ ಸಾಕ್ಷಿದಾರರು, ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ ಎನ್ನುತ್ತಾರೆ.

40. 28, 30, 33 ಮತ್ತು 36ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಸಾಕಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದಾರೆ, ನೀವು ಅವುಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು, ನೋಡಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯರು ಕೊಟ್ಟ ದಾಖಲೆ ನಂ.1(ಎ)ರಂತೆ ನೀವು ನಿಮ್ಮ ವಾದಪತ್ರದ ಐಟಂ ನಂ.1 ಆಸ್ತಿಯನ್ನು 2 ಎಕರೆ ಎಂದು ನಮೂದಿದೆ, ಆದರೆ 3 ಎಕರೆ 14 ಗುಂಟೆ ನಮೂದಿಸಿದೆ ಎಂದರೆ ಸಾಕ್ಷಿದಾರರು, 3 ಎಕರೆ 14 ಗುಂಟೆ ನಮೂದಿಸಿರುವುದು ಸರಿಯಿರುತ್ತದೆ ಎನ್ನುತ್ತಾರೆ. ಅಲ್ಲಿ Reddy constructions ರವರು ಎಲ್ಲಾ Apartment ಗಳನ್ನು ಕಟ್ಟಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು, ಇನ್ನು ಇಟ್ಟುಕೊಂಡಿದ್ದಾರೆ ಎನ್ನುತ್ತಾರೆ. ವಿಭೂತಿಪುರದಲ್ಲಿರುವ ಆಸ್ತಿ ದಾಖಲೆ ಸಂಖ್ಯೆ 1 ಐಟಂ ನಂ.ಬಿ, ಆಸ್ತಿ ಸಂಖ್ಯೆ 148/1, ವಿಸ್ತೀರ್ಣ 2 ಎಕರೆ 34 ಗುಂಟೆ ಆಸ್ತಿಯನ್ನು ತಂದೆಯವರ ಕಾಲದಲ್ಲಿಯೇ ಮಾರಾಟವಾಗಿ ವಾದಿಯರು ಮತ್ತು ಪ್ರತಿವಾದಿ-1 ರಿಂದ 3, 28, 30, 33 ಮತ್ತು 36ರವರು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು, ಅದು ವಿವಾದಿತ ಜಾಗ ಇದ್ದು, ನಮ್ಮ ತಂದೆಯವರು ಆ ಜಾಗ ಖರೀದಿ ಮಾಡಬೇಡಿ ಎಂದು ಹೇಳಿದ್ದರು ಎನ್ನುತ್ತಾರೆ. ನೀವು ರಿಲೀಸ್ ಡೀಡ್ ಮುಖಾಂತರ ಬಂದ ಆಸ್ತಿಯಲ್ಲಿ 1ನೇ ವಾದಿ, 1 ರಿಂದ 3ನೇ ಪ್ರತಿವಾದಿಯರು ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿದಾರರು, 28ನೇ ಪ್ರತಿವಾದಿ ಇವರ ಮನೆಗೆ ಹೋಗಿ, ನನಗೆ ತೊಂದರೆ ಇದೆ, ನಾನು ಮಾರಾಟ ಮಾಡಬೇಕಾಗಿದೆ ಎಂದು ಹೇಳಿರುತ್ತೇನೆ ಮತ್ತು ಮಾರಾಟ ಮಾಡಿದ್ದೇನೆ ಮತ್ತು ಸಂಬಂಧಪಟ್ಟ ದಾಖಲೆಗಳು 28ನೇ ಪ್ರತಿವಾದಿಯ ಬಳಿ ಇರುತ್ತವೆ

ಎನ್ನುತ್ತಾರೆ. ನೀವು ವಿವಾದಿತ ಜಾಗದಲ್ಲಿ ಮನೆಯನ್ನು ಕಟ್ಟುತ್ತಿದ್ದೀರಿ ಎಂದರೆ ಸಾಕ್ಷಿದಾರರು, ಮುಂದುಗಡೆ ಓಡಾಡಲು ಚಿಕ್ಕ ಜಾಗ ಇತ್ತು, ಅಲ್ಲಿ ತುಂಬಾ ಜನ ಮನೆ ಕಟ್ಟಿದ್ದರಿಂದ ನಾನು ವಿವಾದಿತ ಜಾಗದಲ್ಲಿ ಜಾಗ ತೆಗೆದು ಮನೆ ಕಟ್ಟಿದ್ದೇನೆ ಎನ್ನುತ್ತಾರೆ. ನೀವು ಇದೇ ವಿವಾದಿತ ಜಾಗದಲ್ಲಿ ಸುಮಾರು 15-20 ವರ್ಷಗಳಿಂದ ವಾಸವಾಗಿದ್ದೀರಿ ಎಂದರೆ ಸಾಕ್ಷಿದಾರರು, 28 ನೇ ಪ್ರತಿವಾದಿಯರು ನನಗೆ, ಅಲ್ಲಿ ಸಾಕಷ್ಟು ಜನ ಮನೆ ಕಟ್ಟಿದ್ದಾರೆ ಅಲ್ಲಿ ಏನೂ ಆಗುವುದಿಲ್ಲ ಎಂದು ಹೇಳಿದ್ದರು ಎನ್ನುತ್ತಾರೆ. ಇಲ್ಲಿಯವರೆಗೆ ಆ ವಿವಾದಿತ ಜಾಗದಲ್ಲಿ ಯಾರಾದರೂ ಸರಕಾರದವರಾಗಲೀ ಅಥವಾ ಬೇರೆ ಯಾರಾಗಲೀ ಇಲ್ಲಿ ಮನೆ ಕಟ್ಟಬೇಡಿ ಎಂದು ನಿಮಗೆ ಕೇಳಿದ್ದರೆ ಎಂದರೆ ಸಾಕ್ಷಿದಾರರು, 28 ನೇ ಪ್ರತಿವಾದಿ ಮನೆಗೆ ಬಂದು ಗಲಾಟೆ ಮಾಡಿದ್ದಾರೆ ಎನ್ನುತ್ತಾರೆ.

41. ದಾವಾ ಅನುಸೂಚಿ ಐಟಂ ನಂ.3 ಸರ್ವೆ ನಂ.172 ವಿಸ್ತೀರ್ಣ 1 ಎಕರೆ 20 ಗುಂಟೆ ತಲಕಾವೇರಿ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಯವರು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿದಾರರು, ಪ್ರತಿವಾದಿ-30 ನನ್ನ ಸಹೋದರ ನಾಗರಾಜರೆಡ್ಡಿ ಇವರು, ತಲಕಾವೇರಿ ಹೌಸ್ ಬಿಲ್ಡಿಂಗ್ ನವರು ಸ್ವಾಧೀನಪಡಿಸಿಕೊಂಡಿದ್ದಾರೆ, ಈ ಬಗ್ಗೆ 28 ನೇ ಪ್ರತಿವಾಯನ್ನು ಸಾಕಷ್ಟು ಸಲ ಕೇಳಿದ್ದೇನೆ ಎಂದು ಹೇಳಿದ್ದಾರೆ ಮತ್ತು 28 ನೇ ಪ್ರತಿವಾದಿ ನನಗೆ ಹಾರಿಕೆ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ ಎನ್ನುತ್ತಾರೆ. ಈ ದಾವಾ ಅನುಸೂಚಿ ಐಟಂ ನಂ.4 ಸರ್ವೆ 193/2 ಕ್ಷೇತ್ರ 1 ಎಕರೆ 12 ಗುಂಟೆ ಯನ್ನು ತಲಕಾವೇರಿ ಹೌಸ್ ಬಿಲ್ಡಿಂಗ್ ನವರು ಸ್ವಾಧೀನಪಡಿಸಿಕೊಂಡಿದ್ದರೂ, ಇದನ್ನು ಏಕೆ ದಾವೆಯಲ್ಲಿ ಸೇರಿಸಿದ್ದೀರಿ ಎಂದರೆ ಸಾಕ್ಷಿದಾರರು, ಬ್ಯಾಂಕಿನಲ್ಲಿ ಹಣ ಇದ್ದು, ಅದು ವಿವಾದದಲ್ಲಿರುವುದರಿಂದ ಆ ಆಸ್ತಿಯನ್ನು ಸೇರಿಸಿದ್ದೇವೆ ಎನ್ನುತ್ತಾರೆ.

42. ದಾವಾ ಐಟಂ ನಂ.ಇ, ಖಾತೆ ನಂ.168/153 ಆಸ್ತಿಯ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿದಾರರು, ನಾನು ತಿಳಿದುಕೊಳ್ಳಬೇಕು ಎನ್ನುತ್ತಾರೆ. ನಿಮ್ಮ ದೊಡ್ಡಪ್ಪ ಬಂಕದರಾಯಪ್ಪರವರ ವಾರಸುದಾರರು ದಾವಾ ಐಟಂ ನಂ.ಎಫ್, ಸರ್ವೆ ನ.105/2 ಮತ್ತು ಐಟಂ ನಂ.ಜಿ, ಸರ್ವೆ ನಂ.105/3 ಆಸ್ತಿಗಳನ್ನು ಎನ್.ಎ. ಮಾಡಿ ಸೈಟುಗಳನ್ನು ವಿಂಗಡಿಸಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು, ಮಾರಾಟ ಮಾಡಿದ್ದಾರೆ ಎನ್ನುತ್ತಾರೆ.

43. ವಿಭೂತಿಪುರದ ಸರ್ವೆ ನಂ.12/1, ಐಟಂ ನಂ.ಹೆಚ್, ಕ್ಷೇತ್ರ 0-22 ಗುಂಟೆ ನ್ನು ಪಾರ್ಕ್ ಎಂದು ಕರೆಯುತ್ತಾರೆ, ಅದನ್ನು ರೆವಿನ್ಯೂ ಸೈಟ್ ಆಗ ವಿಂಗಡಿಸಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು, 28 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ನಿಮ್ಮ ತಂಗಿ 3 ನೇ ಪ್ರತಿವಾದಿ ಉಮಾ ಇವರ ಲಗ್ನಕ್ಕೋಸ್ಕರ ಮಾರಾಟ ಮಾಡಿದ್ದಾರೆ ಸಾಕ್ಷಿದಾರರು, ನಮ್ಮ ತಂದೆಯ ಕರ್ತವ್ಯ ಇರುತ್ತದೆ ಎನ್ನುತ್ತಾರೆ.

44. ಸರ್ವೆ ನಂ.12/7, ಐಟಂ ನಂ.ಜೆ, ಕ್ಷೇತ್ರ 1 ಎಕರೆ 2 ಗುಂಟೆಯನ್ನು ನಿವೇಶನವನ್ನಾಗಿ ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದಲ್ಲಿ ದಾಖಲೆಗಳನ್ನು ವಿವರವಾಗಿ ಕೊಟ್ಟಿರುತ್ತಾರೆ, ಇದಕ್ಕೇ ನೀವೇನಾದರೂ ಪ್ರತ್ಯುತ್ತರವಾಗಲೀ ಅಥವಾ ಪ್ರತಿರೂಪವಾಗಲೀ, ಅಥವಾ ತಕರಾರಾಗಲೀ ಕೊಟ್ಟಿದ್ದೀರಾ ಎಂದರೆ ಸಾಕ್ಷಿದಾರರು, ಅದನ್ನು ನೋಡಬೇಕಾಗುತ್ತದೆ ಎನ್ನುತ್ತಾರೆ.

(ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದರು, ಕಾಲಾವಕಾಶ ನೀಡಲಾಯಿತು)

O.S. 26018/2022
PW-1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

74 ನೇ ಅ.ನ.ಸಿ. ನ್ಯಾಯಾಧೀಶರು (ಸಿಸಿಎಚ್-75), ಮೇಯೋ ಹಾಲ್ ವಿಭಾಗ, ಬೆಂಗಳೂರು.